**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ ಮಿಸ್ 6/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 09.01.2026** **ಪಿ ಡಬ್ಲ್ಯೂ 1**

**ಪಾಟೀ ಸವಾಲುಃ** 3 ರಿಂದ 8 ನೇ ಎದುರುದಾರರ ಪರ ಶ್ರೀ ಆರ್ ಪಿ ಪರ ಶ್ರೀ ಪಿ ಬಿ ವಕೀಲರಿಂದಃ

ನಾನು ಅವಿದ್ಯಾವಂತೆ. ಈ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ನಾನು ಸಿವಿಲ್ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ನಾನು ಪಾಲು ವಿಭಾಗ ಕೋರಿ ಸಲ್ಲಿಸಿದ್ದೆನು. ಸದರಿ ದಾವೆಯ ನಂಬರ್ ನನಗೆ ನೆನಪಿಲ್ಲ. ಸದರಿ ದಾವೆಯನ್ನು ನಾನು ನನ್ನ ಅಣ್ಣನ ವಿರುದ್ಧ ಸಲ್ಲಿಸಿದ್ದೆನು. 3 ರಿಂದ 8 ನೇ ಎದುರುದಾರರು ಮತ್ತು ನನಗೆ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿ. ನಾನು ಈಗ ಜಿಟಿ ಕಟ್ಟೆ ಗ್ರಾಮದಲ್ಲಿ ಇದ್ದೇನೆ. ಈ ಅರ್ಜಿಯ ಮುಖ್ಯ ವಿಚಾರಣೆಯಲ್ಲಿ ಗುಡ್ಡದ ತಿಮ್ಮಿನಕಟ್ಟೆಯಲ್ಲಿ ವಾಸವಾಗಿದ್ದೇನೆ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ಅದಕ್ಕೆ ಜಿಟಿ ಕಟ್ಟೆ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಸದರಿ ಊರಿಗೂ ಹಾಗೂ ಹರಿಹರಕ್ಕೂ ಓಡಾಡಲು ಸಾಕಷ್ಟು ಬಸ್ ಸೌಲಭ್ಯ ಇದೆ ಎಂದರೆ ಸರಿ. ನಾನು ಸಲ್ಲಿಸಿದ ದಾವೆಯಲ್ಲಿ ನನಗೆ ನ್ಯಾಯಾಲಯ ಪಾಟೀ ಸವಾಲಿಗೆ ಸಾಕಷ್ಟು ಸಮಯ ನೀಡಿದ್ದರೂ ಸಹ ನಾನು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ದಾವೆ ಯಾವ ಕಾಣಕ್ಕಾಗಿ ವಜಾ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ ಇದ್ದ ಕಾರಣ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದು ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸದಿದ್ದರೂ ಸಹ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನಾನು ನ್ಯಾಯಾಲಯಕ್ಕೆ ಒಬ್ಬಳೇ ಬಂದಿದ್ದೇನೆ. ಈ ದಿನ ನಾನು ನನ್ನ ಅಣ್ಣ ಲೋಕೇಶ ಜೊತೆಗೆ ಬಂದಿದ್ದರೂ ಸಹ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ವಕೀಲರಿಗೆ ನನ್ನ ಗಂಡ ಮಾಹಿತಿ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಮಾಹಿತಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಅಂಶಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ. 3 ರಿಂದ 8 ನೇ ಎದುರುದಾರರಿಂದ ಆಸ್ತಿಯನ್ನು ಕಬಳಿಸಬೇಕು ಹಾಗೂ ಅವರಿಗೆ ತೊಂದರೆ ಕೊಡಬೇಕು ಎಂಬ ದುರುದ್ದೇಶದಿಂದ ನಾನು ಮತ್ತು ಉಳಿದ ಪಕ್ಷಗಾರರು ಸೇರಿ ಸುಳ್ಳು ದಾವೆ ಸಲ್ಲಿಸಿದ್ದೆವು ಮತ್ತು ಈ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ